‘ಗ್ರೀನ್ ಪೀಸ್’ ವರದಿಯಂತೆ, 2019ರಲ್ಲಿ, ಜಾಗತಿಕವಾಗಿ ಜೈವಿಕ ಪ್ಲಾಸ್ಟಿಕ್‌ಗಳ ಉತ್ಪಾದನಾ ಸಾಮರ್ಥ್ಯ 2.11 ದಶಲಕ್ಷ ಟನ್ ಮುಟ್ಟಿತ್ತು. ಇದರಲ್ಲಿ ಶೇ. 55.5ರಷ್ಟು ಅಂದರೆ, ಸುಮಾರು 1.7 ದಶಲಕ್ಷ ಟನ್‌ಗಳಷ್ಟು ಬಯೊ ಡಿಗ್ರೇಡಬಲ್ ಪ್ಲಾಸ್ಟಿಕ್ ಉತ್ಪಾದಿಸಲಾಗಿತ್ತು. ಸದ್ಯ, ಯೂರೋಪ್ ಮತ್ತು ಉತ್ತರ ಅಮೆರಿಕ ರಾಷ್ಟ್ರಗಳಲ್ಲಿ ಈ ಬಯೊ ಡಿಗ್ರೇಡಬಲ್ ಪ್ಲಾಸ್ಟಿಕ್ ಹೆಚ್ಚು ಬಳಸಲಾಗುತ್ತಿದೆ. ಆದರೆ, ಇಂತಹ ಪ್ಲಾಸ್ಟಿಕ್‌ಗಳಿಗೆ ಏಷ್ಯಾದಲ್ಲಿ, ಅದರಲ್ಲಿಯೂ ಮುಖ್ಯವಾಗಿ ಚೀನಾ ಮತ್ತು ಭಾರತದಲ್ಲಿ ಬೇಡಿಕೆ ಹೆಚ್ಚುತ್ತಿದೆ. 2023ರ ವೇಳೆಗೆ, ಜಾಗತಿಕವಾಗಿ ಇವುಗಳ ಬೇಡಿಕೆ 5.5 ದಶಲಕ್ಷ ಟನ್‌ಗೆ ಏರಲಿದೆ.



ಕಚೇರಿಯಿಂದ ಲೆಟರ್ ಬಂದಿತು. 2022ರ ಹೊತ್ತಿಗೆ ಪರಿಸರಕ್ಕೆ ಮಾರಕವಲ್ಲದ ಪ್ಯಾಕಿಂಗ್ ಪ್ಲಾಸ್ಟಿಕ್ ತಯಾರು ಮಾಡುತ್ತೇವೆ, ಅದರ ಸಂಶೋಧನೆಯಲ್ಲಿ ತೊಡಗಿಕೊಂಡಿದ್ದೇವೆ ಎಂದು ಪ್ರತಿಕ್ರಿಯೆ ನೀಡಿದರು’ ಎಂಬುದಾಗಿ ಸಂತೋಷ ಗುಡ್ಡಿಯಂಗಡಿ ತಿಳಿಸಿದರು.

ಡೆಹ್ರಾಡೂನ್‌ನಲ್ಲಿ ಟ್ರಕ್ ಮೂಲಕ ತನ್ನದೇ ಕಂಪನಿಯ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸುವ ಕಾರ್ಯವನ್ನು ಮಾಡುತ್ತಿರುವ ನೆಸ್ಲೆ ಕಂಪನಿ ಕೂಡ, 2025ರ ಹೊತ್ತಿಗೆ ಪರಿಸರ ಸ್ನೇಹಿ ಪ್ಯಾಕೇಜಿಂಗ್ ಸಾಧನಗಳನ್ನು ಬಳಸುತ್ತೇವೆ ಎಂದು ಹೆಗ್ಗಡಹಳ್ಳಿಯ ಶಾಲಾ ಮಕ್ಕಳಿಗೆ ಭರವಸೆ ನೀಡಿದೆ.

ಕೋಲ್ಕತ್ತಾದಿಂದ ಇ–ಮೇಲ್ ಮೂಲಕ ಪ್ರತಿಕ್ರಿಯಿಸಿರುವ ಯುನಿಬಿಕ್ ಕಂಪನಿ, ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಯಾವುದೇ ಉತ್ಪನ್ನ ಸಿಗದ ಕಾರಣ ಅದನ್ನು ಬಳಸುತ್ತಿದ್ದೇವೆ, ಪರ್ಯಾಯ ದೊರೆತರೆ, ಖಂಡಿತ ಅದೇ ಉತ್ಪನ್ನವನ್ನು ಬಳಸುತ್ತೇವೆ ಎಂದು ಹೇಳಿದೆ.

ಸಂತೋಷ್ ಅವರ ಪರಿಸರ ಕಾಳಜಿಯನ್ನು ಮೈಸೂರು ಜಿಲ್ಲಾ ಪಂಚಾಯಿತಿಯೂ ಶ್ಲಾಘಿಸಿದೆ. ತನ್ನ ಸಾಮಾನ್ಯ ಸಭೆಯಲ್ಲಿ ಈ ಬಗ್ಗೆ ಮಾಹಿತಿ ಪ್ರದರ್ಶಿಸಿ, ನಂಜನಗೂಡು ತಾಲ್ಲೂಕಿನ ಎಲ್ಲ ಶಾಲೆಗಳು ಇಂತಹ ಅಭಿಯಾನ ನಡೆಸಿದರೆ ಅನುಕೂಲವಾಗುತ್ತದೆ. ಎಲ್ಲ ಶಾಲೆಗಳು ಈ ಕಾರ್ಯ ಕೈಗೆತ್ತಿಕೊಳ್ಳಬೇಕು ಎಂದು ನಿರ್ಣಯ ತೆಗೆದುಕೊಂಡಿದೆ.

ಕಂಪನಿಗಳು ಉತ್ಪಾದಿಸುವ ಒಟ್ಟು ಪ್ಲಾಸ್ಟಿಕ್ ತ್ಯಾಜ್ಯದಲ್ಲಿ ಶೇ 50ರಷ್ಟನ್ನಾದರೂ ಅವು ವಾಪಸ್ ಪಡೆದು ಪುನರ್‌ಬಳಕೆ ಮಾಡುವಂತಾದರೆ, ಪರಿಸರದ ಮೇಲಿನ ‘ಪ್ಲಾಸ್ಟಿಕ್ ಒತ್ತಡ’ ಎಷ್ಟೋ ಕಡಿಮೆಯಾಗುತ್ತದೆ ಎಂಬ ಸಲಹೆ ಸಂತೋಷ್ ಅವರದು.

ಸರ್ಕಾರಿ ಅಧಿಕಾರಿಯೊಬ್ಬರು ಮನಸು ಮಾಡಿದರೆ, ಪರಿಸರ ರಕ್ಷಣೆಗೆ ಯಾವ ರೀತಿ ಕೊಡುಗೆ ಕೊಡಬಹುದು ಎಂಬುದಕ್ಕೆ ಸಾಕ್ಷಿ, ಪಿಡಿಒ ಆಗಿರುವ ಯತೀಶ್ ಚಂದ್ರ. ಮೊದಲು, ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಚಕ್ಕೆರೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿದ್ದ (ಪಿಡಿಒ) ಇವರು, ಪಂಚಾಯಿತಿ ಅನುದಾನದಿಂದ ಪ್ರತಿ ಮನೆಗೆ ಎರಡು ಬಟ್ಟೆ ಚೀಲವನ್ನು ಉಚಿತವಾಗಿ ಕೊಡುವ ಮೂಲಕ ಪರಿಸರ ಜಾಗೃತಿ ಮೂಡಿಸಿದ್ದರು. ಹೀಗೆ, ಒಂದು ವರ್ಷದಲ್ಲಿ ಎಂಟು ಸಾವಿರ ಚೀಲಗಳನ್ನು ವಿತರಿಸಿದ್ದ ಇವರು, ಈಗ ರಾಮನಗರ ತಾಲ್ಲೂಕು ಮಂಚನಾಯಕನಹಳ್ಳಿ ಪಂಚಾಯಿತಿ ಪಿಡಿಒ ಆಗಿದ್ದು, ಇಲ್ಲಿಯೂ ಈ ಕಾರ್ಯವನ್ನು ಮುಂದುವರಿಸುತ್ತಿದ್ದಾರೆ.

‘ಪರಿಸರ ಸಂರಕ್ಷಣೆ ಕುರಿತ ಕಾರ್ಯಕ್ರಮ ಹಮ್ಮಿಕೊಳ್ಳಲು ಜಿಲ್ಲಾ ಅಥವಾ ತಾಲ್ಲೂಕು ಪಂಚಾಯಿತಿ ಅನುದಾನವನ್ನೇ